ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 37/2017 ಸಿಡಬ್ಲೂ :4 ಪಿ ಡಬ್ಲೂ : 2

| | |
|---|---|
| ಹೆಸರು | ಶಿವಮ್ಮ |
| ಗಂಡನ ಹೆಸರು | ಕೃಷ್ಣಪ್ಪ |
| ವಯಸ್ಸು | 65 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಬ್ರಹ್ಮಪುರ |

ದಿನಾಂಕಃ 12.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ</u>

1. ಚಾಸಾ 1 ನನ್ನ ಅಳಿಯ, ಆತ ಅನಾರೋಗ್ಯದಿಂದ ಮರಣ ಹೊಂದಿರುತ್ತಾನೆ. ಚಾಸಾ 2 ನನ್ನ ಸೊಸೆ, ಚಾಸಾ 3 ನನ್ನ ಮಗ. ಚಾಸಾ 5 ನನ್ನ ಮೊಮ್ಮಗ. ಚಾಸಾ 6 ನನ್ನ ಮಗಳು. ಚಾಸಾ 7 ರಿಂದ 11 ರವರ ಪರಿಯವಿದೆ. ಆರೋಪಿತರ ಪರಿಚಯವಿದೆ. ಸುಮಾರು 7 ವರ್ಷಗಳ ಹಿಂದೆ ಯುಗಾದಿ ಹಬ್ಬದ ದಿನದಂದು ಚಾಸಾ 2 ರವರು ಅರಳಿ ಕಟ್ಟೆ ಹತ್ತಿರ ಎಲೆ ಬಿಸಾಡಲು ಹೋಗಿದ್ದಳು. ಆಗ ಅಲ್ಲಿ ಚಾಸಾ 1 ನನ್ನ ಅಳಿಯ ನಾಗೇಂದ್ರ ಮತ್ತು 2 ನೇ ಆರೋಪಿ ನಂಜುಂಡ ಜಗಳವಾಡುತ್ತಿದ್ದು ಆತನಿಗೆ ಹೊಡೆಯತ್ತಿರುವುದನ್ನು ನೋಡಿರುತ್ತಾಳೆ. ಆಕೆ ಮನೆಗೆ ಬಂದು ವಿಷಯ ತಿಳಿಸಿ ನಮ್ಮಗಳನ್ನು ಕರೆದುಕೊಂಡು ಹೋಗಿರುತ್ತಾಳೆ. ನಾವು ಜಗಳ ಬಿಡಿಸಿ ಚಾಸಾ1 ರವರನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಆಗ ಏಕಾಏಕಿ ಆರೋಪಿತರು ನಮ್ಮ ಮನೆಗೆ ಬಂದು 1 ನೇ ಆರೋಪಿಯು ರಿಪೀಸ್ ಪಟ್ಟಿಯಲ್ಲಿ ನನ್ನ ಅಳಿಯ ಮತ್ತು ನನ್ನ ಮೊಮ್ಮಗನಿಗೆ ಹೊಡೆದು ತಲೆಗೆ ಪೆಟ್ಟು ಮಾಡಿ ಇಬ್ಬರಿಗೂ ರಕ್ತ ಗಾಯ ಮಾಡಿರುತ್ತಾನೆ. 2 ನೇ ಆರೋಪಿಯು ನನ್ನ ಮಗಳನ್ನು

ಮೋರಿಗೆ ತಳ್ಳಿ ಕಾಲಿನಿಂದ ಹಾಕಿ ತಳ್ಳಿರುತ್ತಾನೆ. ನನ್ನ ಮಗ ಜಗಳ ಬಿಡಿಸಲು ಬಂದಾಗ 1 ನೇ ಮತ್ತು 4 ನೇ ಆರೋಪಿಯು ನನ್ನ ಮಗನನ್ನು ಕೆಳಗೆ ತಳ್ಳಿ ಕಾಲಿನಿಂದ ತುಳಿದು ಒದ್ದಿರುತ್ತಾರೆ. 1 ನೇ ಆರೋಪಿ ಮತ್ತು 4 ನೇ ಅರೋಪಿಯು ಚಾಸಾ 2 ನನ್ನ ಸೊಸೆಗೆ ತುಳಿದು ಗಾಯ ಪಡಿಸಿರುತ್ತಾರೆ. ಆಗ ಸಾರ್ವಜನಿಕರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. 1 ನೇ ಆರೋಪಿ ನನಗೆ ಹೊಡೆದು, ಎದೆ ಭಾಗಕ್ಕೆ ಕಾಲಿನಿಂದ ತುಳಿದಿರುತ್ತಾನೆ. ನನಗೆ ಆಗ ಎದೆನೋವು ಬಂದು ರಕ್ತ ಹೆಪ್ಪುಗಟ್ಟಿರುತ್ತದೆ. ನಂತರದಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರಾಗಿ ನನ್ನ ಹೇಳಿಕೆಯನ್ನು ನ್ಯಾಯಾಧೀಶರ ಸಮ್ಮುಖ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ದೊಣ್ಣೆ ಮತ್ತು ರಿಪೀಸ್ ಪಟ್ಟಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಎಂ ಒ 1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ ಒ 3 ಎಂದು ಗುರುತಿಸಲಾಗಿದೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಗಲಾಟೆಯು ಹಣದ ವಿಚಾರವಾಗಿ ಆಗಿರುತ್ತದೆ. 1 ನೇ ಆರೋಪಿಗೆ ರೂ.16 ಸಾವಿರವನ್ನು ಚಾಸಾ 1 ರವರು ಸಾಲವಾಗಿ ನೀಡಿದ್ದು , ಅದನ್ನು ಕೇಳಲು ಹೋದಾಗ 1 ನೇ ಆರೋಪಿಯು ಗಲಾಟೆ ಮಾಡಿರುತ್ತಾನೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು : ಎ ಪಿ ಪಿ ರವರಿಂದಃ

2. ದಿಃ 29.03.2017 ರ ನಮ್ಮ ಊರಿನ ಹಳ್ಳಿ ಕಟ್ಟೆಯ ಹತ್ತಿರ ಜಗಳವಾಗುತ್ತಿತ್ತು ಎಂದರೆ ಸರಿ. ಜಗಳವಾದಾಗ ನಾನು, ನಿತೀನ್, ಭಾಗ್ಯಮ್ಮ, ಚಾಸಾ 2 ಹಾಗೂ ನನ್ನ ಮಗ ಅಲ್ಲಿಗೆ ಹೋದವು ಎಂದರೆ ಸರಿ. ಆಗ ನನ್ನ ಅಳಿಯ ನಾಗೇಂದ್ರ 1 ನೇ ಆರೋಪಿಯ ಬಳಿ ಹಣ ಕೇಳುತ್ತಿದ್ದರು ಎಂದರೆ ಸರಿ. ಆಗ 1 ನೇ ಆರೋಪಿಯು ತನ್ನ ಬಳಿ ಹಣ ಇಲ್ಲ ಎಂದು ಹೇಳಿ ಜಗಳ ತೆಗೆದು ರಸ್ತೆಯ ಬದಿಯಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ನನ್ನ ಅಣ್ಣನ ಎಡತಲೆ, ಬಲಭುಜ, ಬೆನ್ನು ಮತ್ತು ಎಡತೊಡೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ ಎಂದರೆ ಸರಿ. ನಾಗೇಂದ್ರ ಅವರು ನೋವಿನಿಂದ ಕೂಗಿಕೊಂಡಾಗ ಆರೋಪಿಯ ತಂದೆ ಮತ್ತು ಸುರೇಶ, ರಾಜೇಶ ಮತ್ತು ಶೋಭಾ ಅವರು ಜಗಳವನ್ನು ತೆಗೆದು 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ 5 ರವರಿಗೆ ಹೊಡೆದು, ತಲೆಗೆ ಹೊಡೆದು ರಕ್ತ ಗಾಯ ಮಾಡಿದನು ಎಂದರೆ ಸರಿ. 2 ನೇ ಆರೋಪಿಯು ನಿತೀನ್ ಅವರ ಮೇಲೆ ಗುದ್ದಿ ನೋವು ಮಾಡಿರುತ್ತಾನೆ ಎಂದರೆ ಸರಿ. 2 ನೇ ಆರೋಪಿಯು ಅಲ್ಲೇ ಬಿದ್ದಿದ್ದ ರಿಪೀಸ್ ಪಟ್ಟಿ ತೆಗೆದು ಚಾಸಾ6 ರವರ ಮೈ ಕೈ ಮೇಲೆ ಹೊಡೆದು ಗಾಯ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು 2 ನೇ ಆರೋಪಿಯ ಕೈಯಲ್ಲಿದ್ದ ದೊಣ್ಣೆ ರಿಪೀಸ್ ಪಟ್ಟಿಯಿಂದ ಕಿತ್ತುಕೊಂಡು ಚಾಸಾ6 ರವರಿಗೆ ಮೈ ಕೈ ಮೇಲೆ ಹೊಡೆದು ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. 3 ರಿಂದ 5 ನೇ ಆರೋಪಿತರು ಕೈಗೆ ನನಗೆ ಹೊಡೆದು ನೋವು ಮಾಡಿರುತ್ತಾರೆ ಎಂದರೆ ಸರಿ. ರಾಜೇಶ ಮತ್ತು ಸುರೇಶ ನನ್ನ ಪತಿ ರವಿ ಕುಮಾರ್ ಅವರಿಗೆ ನಿನ್ನ ಭಾವನ ಕುರಿತು ಬಂದಿದ್ದೀಯಾ ಎಂದು ಹೇಳಿ ಆತನ ಶರ್ಟನ್ನು ಹರಿದು ಹಾಕಿ, ಕೈಯಿಂದ ಮೈ ಕೈ ಮೇಲೆ ಗುದ್ದಿ,

ಕಾಲುಗಳಿಂದು ಹೊಡೆದು ನೋವು ಉಂಟು ಮಾಡಿದರು ಎಂದರೆ ಸರಿ. ನೋವು ತಳಲಾರದೆ ಕಿರುಚಿಕೊಂಡಾಗ ಗ್ರಾಮಸ್ಥರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತಾರೆ ಎಂದರೆ ಸರಿ. 1 ನೇ ಹಾಗೂ 2 ನೇ ಆರೋಪಿತರು ದೊಣ್ಣೆ ಮತ್ತು ರಿಪೀಸ್ ಪಟ್ಟಿಯನ್ನು ಅಲ್ಲೇ ಬಿಸಾಡಿ ಹೋಗಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ : ಶ್ರೀ ಸಿ ಪಿ ಎಂ ವಕೀಲರಿಂದ:</u>

1. ನಾನು ಪೊಲೀಸರಿಗೆ ಸುಮಾರು 7 ವರ್ಷದ ಹಿಂದೆ ಯುಗಾದಿ ಹಬ್ಬದ ದಿನ ನನ್ನ ಸೊಸೆ ಊಟದ ಎಲೆಯನ್ನು ಬಿಸಾಡಲು ಹೋದಾಗ ಗಲಾಟೆಯನ್ನು ನೋಡಿದ್ದು, ಮನೆಗೆ ಬಂದು ವಿಚಾರವನ್ನು ತಿಳಿಸಿರುತ್ತಾಳೆ ಎಂದು ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ನಾನು ಹೇಳಿದ ರೀತಿಯೇ ನನ್ನ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿಯೇ ಪೊಲೀಸರಿಗೆ ಹೇಳಿಕೆ ನೀಡಿದ್ದು, ಅದನ್ನು ಹೊರತು ಪಡಿಸಿ ಬೇರೆ ಏನು ಹೇಳಿರುವುದಿಲ್ಲ. ನಮ್ಮ ಮನೆಯಿಂದ ಅರಳಿ ಕಟ್ಟೆ ಸುಮಾರು ಅರ್ಧ ಫರ್ಲಾಂಗ ದೂರ ಇರಬಹುದು. ಆರೋಪಿತರು ಚಾಸಾ 1 ರವರೊಂದಿಗೆ ಜಗಳವಾಡಿ ಅವರಿಗೆ ಹಲ್ಲೆ ಮಾಡಿರುವುದಿಲ್ಲ ಹಾಗೂ ನಮ್ಮಗಳ ಜೊತೆಯೂ ಸಹ ಜಗಳ ಮಾಡಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೆ ನನ್ನ ಅಳಿಯ ನಾಗೇಂದ್ರ ರೂ.7 ಸಾವಿರ ಸಾಲವನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು ಕೇಳಲು ನನ್ನ ಅಳಿಯ ನಾಗೇಂದ್ರ ಮತ್ತು ಆತನ ಮಗ ನಿತೀನ್ 2 ನೇ ಆರೋಪಿಯ ಬಳಿ ಹೋಗಿ ಹಣವನ್ನು ಕೇಳಿದಾಗ ಆತ ಕಾಲಾವಕಾಶ ಕೇಳಿದಾಗ ಆತನೊಂದಿಗೆ ಜಗಳವಾಡಿ ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ನನ್ನ ಅಳಿಯ

ಮತ್ತು ಆತನ ಮಗ ವಿರುದ್ದ ದೂರನ್ನು ದಾಖಲು ಮಾಡಿದ್ದರು ಎಂದರೆ ಸರಿ. 2 ನೇ ಆರೋಪಿಗೆ ಹೊಡೆದ ಕಾರಣ ಆತನಿಗೆ ಪೆಟ್ಟಾಗಿ ಆತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಗಲಾಟೆಯಾದಾಗ ನಾನಾಗಲೀ ಅಥವಾ ನಮ್ಮ ಕುಟುಂಬದವರಾಗಲೀ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಪಕ್ಕದ ಮನೆಯಲ್ಲಿದ್ದು ಅವರು ಹಣವನ್ನು ಹಿಂದಿರುಗಿಸಿಲ್ಲ ಎಂಬ ದ್ವೇಷವನ್ನು ಇಟ್ಟುಕೊಂಡು ನನ್ನ ಅಳಿಯ ನಾಗೇಂದ್ರ ಹಾಗೂ ಆತನ ಮಗ ನಿತೀನ್ 2 ನೇ ಆರೋಪಿಯ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದೆರ ಸರಿಯಲ್ಲ. ಆರೋಪಿತರು ನಮಗೆ ಎಂದಿಗೂ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರಿರುವ ಎಂ ಒ 1 ಅನ್ನು ತೋರಿಸಿ ಅದು ದೊಣ್ಣೆಯಾ ಅಥವಾ ಕಡ್ಡಿಯಾ ಎಂದರೆ ಸಾಕ್ಷಿ ಅದು ದೊಣ್ಣೆ ಎಂದು ಹೇಳುತ್ತಾರೆ. ಎಂ ಒ 1 ಒಲೆಗೆ ಉರಿಸುವ ಕಡ್ಡಿಯಾಗಿದ್ದು, ಅದು ದೊಣ್ಣೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಒ 2 ರಿಪೀಸ್ ಪಟ್ಟಿಯಲ್ಲ ಅದು ಕಿಟಕಿಗೆ ಉಪಯೋಗಿಸುವ ಮರದ ಪಟ್ಟಿ ಎಂದರೆ ಸರಿಯಲ್ಲ. ಮನೆಯಲ್ಲೇ ಇರುವ ಕಡ್ಡಿ, ಮರದ ಪಟ್ಟಿ ಹಾಗೂ ಹರಿದ ಶರ್ಟನ್ನು ಕೇಸಿಗೆ ಪೊಲೀಸರೊಂದಿಗೆ ಶಾಮೀಲಾಗಿ ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ 2 ನೇ ಆರೋಪಿ ಕೇವಲ ರೂ.7 ಸಾವಿರ ನೀಡಬೇಕು ಎಂದರೆ ಸರಿಯಲ್ಲ. ಆರೋಪಿತರು ನಮ್ಮಗಳಿಗೆ ಹೊಡೆದು ರಕ್ತಗಾಯಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊಡೆದು, ತುಳಿದು, ಎಂ ಒ 1 ಮತ್ತು 2 ಅನ್ನು ಉಪಯೋಗಿಸಿ ರಕ್ತ ಗಾಯಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. 2 ನೇ ಆರೋಪಿಯು ನೀಡಿದ ದೂರು ಸಿಸಿ ನಂ.325/2017 ಎಂದು ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಅವರ ಮುಂದೆ ನೋಂದಣಿಯಾಗಿತ್ತು ಎಂದರೆ ಸರಿಯಲ್ಲ. ಸದರಿ ಕೇಸು ನನ್ನ ಮಗ ತೀರಿಕೊಂಡ ಕಾರಣ ಮುಕ್ತಾಯವಾಗಿರುತ್ತದೆ ಎಂದರೆ

ನನಗೆ ಗೊತ್ತಿಲ್ಲ. ನಾನು ಆರೋಪಿಯ ಮೇಲೆ ಇರುವ ದ್ವೇಷಕ್ಕಾಗಿ ಅವರು ಯಾವುದೇ ಹಲ್ಲೆ ಮಾಡಿ ರಕ್ತ ಗಾಯಪಡಿಸದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ರಕ್ತಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಅದನ್ನು ಹೊರತು ಪಡಿಸಿ ನಾನು ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ನಾನು ಹೇಳಿಕೆಯನ್ನು ಮಂಡ್ಯ ನ್ಯಾಯಾಲಯದಲ್ಲಿ ನೀಡಿರುತ್ತೇನೆ. ನಾನು ಮಂಡ್ಯ ನ್ಯಾಯಾಲಯದಲ್ಲಿ ಪೋಲೀಸರು ಹೇಳಿ ಕೊಟ್ಟಂತೆ ಸುಳ್ಳು ಸಂಗತಿಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಯಾವುದೇ ರೀತಿ ಹಲ್ಲೆ ಮಾಡದೇ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಯನ್ನು ಹಾಜರುಪಡಿಸಿ ನನಗೆ ಚಿಕಿತ್ಸೆಗೆ ಹಣ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಹಲ್ಲೆ ಆಗಿರುವುದಿಲ್ಲ ಹಾಗೂ ನನಗೆ ಯಾವುದೇ ರಕ್ತ ಗಾಯಗಳು ಆಗಿರುವುದಿಲ್ಲ ಹಾಗೂ ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಳಿಯ 2 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದರು ಸಹ, ಅವರು ದೂರು ನೀಡಿದ್ದರೆ ತೊಂದರೆಯಾಗುತ್ತದೆ ಎಂಬ ದುರುದ್ದೇಶದಿಂದ ನಾವೇ ಮೊದಲು ಹೋಗಿ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.

-